

# ನವರಾತ್ರಿಯ ನವರಂಗ್

## ಭಾವ–ಬಣ್ಣಗಳ ಜುಗಲಬಂದಿ

**ನವರಾತ್ರಿ ಎನ್ನುವುದು ಒಂಬತ್ತು ಬಣ್ಣಗಳ ಮೋಹಕ ಲೋಕ. ಒಂಬತ್ತು ದಿನಗಳ ಹಬ್ಬದಲ್ಲಿ, ಒಂಬತ್ತು ಬಣ್ಣಗಳು ನವಭಾವಗಳ ಉದ್ದೀಪನಗೊಳಿಸುತ್ತವೆ. ಒಂದೊಂದು ಬಣ್ಣವೂ ಒಂದೊಂದು ಭಾವವನ್ನು ಮೀಟುತ್ತ, ಒಂದೊಂದು ಭಾವವೂ ಒಂದೊಂದು ಬಣ್ಣದೊಂದಿಗೆ ಬಂಧ ಹೊಂದುವ ಸಮಯ 'ನವರಾತ್ರಿ.' ಯಾವ ಬಣ್ಣಕ್ಕೆ ಏನು ಅರ್ಥ? ಯಾವ ಭಾವಕ್ಕೆ ಯಾವ ಬಣ್ಣ ಅನ್ವರ್ಥ? ರಂಗಿನ ಲೋಕದ ಗುಂಗಿನಲ್ಲೊಂದು ಸುತ್ತು.**

**■ ಸುಶೀಲಾ ಡೋಣೂರ**

ನವರಾತ್ರಿ ಎಂದೊಡನೆ ಮನವರಳುವುದು ಅದರೊಂದಿಗೆ ಬರುವ ಬಣ್ಣಗಳ ಬೆಸುಗೆಯಿಂದ. ನವರಾತ್ರಿ ದುರ್ಗಾಪೂಜೆ, ಬೊಂಬೆಗಳ ಪ್ರದರ್ಶನ, ವಿಜಯದಶಮಿಯ ಸಂಭ್ರಮ... ಇದೆಲ್ಲವನ್ನು ಮೀರುವ ಖುಷಿಯೆಂದರೆ ಈ ಬಣ್ಣಗಳು ನೀಡುವ ಹಿತಾನುಭವ. ಬಣ್ಣಗಳ ಹಬ್ಬ ಎಂದೊಡನೆ ಹೋಳಿ ನೆನಪಾಗಬಹುದು. ಆದರೆ ಹೆಣ್ಮಕ್ಕಳ ರಂಗಿನ ಹಬ್ಬ ನವರಾತ್ರಿಯ ನವರಂಗು.

ಒಂದರ್ಥದಲ್ಲಿ ಹೆಣ್ಣಿನ ಸೃಷ್ಟಿಯೇ ಸಂಭ್ರಮದ ಸಂಕೇತ. ಹೆಣ್ಣು ತಾನೂ ಸಂಭ್ರಮವನ್ನುಂಡು, ಸುತ್ತಲಿನವರಿಗೂ ಖುಷಿ ಹಂಚಲು ಬಯಸುವ ಜೀವ. ಹೆಣ್ತನವನ್ನು ಪ್ರಕಟಿಸಬೇಕೆನ್ನುವ ಉತ್ಕಟ ಬಯಕೆ ಅವಳ ಎದೆಯಾಳದಲ್ಲಿ ಯಾವತ್ತೂ ಮಿಸುಕಾಡುತ್ತಲೇ ಇರುತ್ತದೆ. ತನ್ನನ್ನು ತಾನು ಹೊಸದಾಗಿ ಕಂಡುಕೊಳ್ಳುವ ಮತ್ತು ತೋರಿಸಿಕೊಳ್ಳುವ ತಹತಹಿಕೆ ಅವಳ ಅಂತರಾಳದಲ್ಲಿ ಸದಾ ಜಿನುಗುತ್ತಿರುತ್ತದೆ. ಅಂಥ ಅವಕಾಶಗಳಿಗಾಗಿ, ಸಂದರ್ಭಗಳಿಗಾಗಿ ಕಾಯುವ ಉಮೇದಿಗೆ ಸಂಚಲನ ತುಂಬುವ ಹಬ್ಬ ನವರಾತ್ರಿ.

ನವರಾತ್ರಿಯ ನವರೂಪಗಳಿಗೆ ಸಿದ್ಧರಾಗಲು ಒಂಬತ್ತು ಬಗೆಯ ದಿರಿಸುಗಳನ್ನು ಹೊಂದಿಸಬೇಕು. ಆ ಒಂಬತ್ತು